ಕೋನ್ ಮೇಳಕುಂದಾ ಗ್ರಾಮದಲ್ಲಿ ಗೂಳಿಗಳ ಹಾವಳಿ.

172(2217)

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೋನ ಮೇಳ ಕುಂದಾ ಗ್ರಾಮದಲ್ಲಿ ಗೂಳಿಗಳ ಹಾವಳಿಯು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಗೂಳಿಗಳ ಹಾವಳಿಯಿಂದ ರೈತರ ಬೆಳೆಗಳಿಗೆ ಆದ ಹಾನಿ ಎಷ್ಟು? ವಿವರಗಳನ್ನು ಒದಗಿಸುವುದು.

ಇ) ಸರ್ಕಾರದ ಗಮನಕ್ಕೆ ಬಂದಿದ್ದರೆ ಇದುವರೆಏಗೂ ಯಾವ ಕ್ರಮಗಳನ್ನು ಕೈಗೊಂಡಿರುತ್ತೀರಿ? (ವಿವರಗಳನ್ನು ಒದಗಿಸುವುದು)

ಈ) ಸರ್ಕಾರ ಇದುವರೆಏಗೂ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ ಇದಕ್ಕೆ ಕಾರಣಗಳೇನು? ಮತ್ತು ಸರ್ಕಾರವು ಮುಂದೆ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ವಿವರ ನೀಡುವುದು.

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಹೌದು

ಆ) ಈ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ. ಏಕೆಂದರೆ, ವರದಿಗಳ ಪ್ರಕಾರ ಯಾವುದೇ, ಔಪಚಾರಿಕವಾಗಿ ದೂರುಗಳನ್ನು ಮಾಡಿದಂತೆ ಕಂಡು ಬರುವುದಿಲ್ಲ.

ಇ) ಅರಣ್ಯ ಇಲಾಖೆಯ ಸಹಕಾರದೊಂದಿಗೆ ಅಂತಹ ಪ್ರಾಣಿಗಳನ್ನು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಪ್ರಶ್ನೆ (ಆ)ಕ್ಕೆ ಸಂಬಂಧಿಸಿದಂತೆ ಹೇಳುವುದೇನೆಂದರೆ ಒಂದೂವರೆ ವರ್ಷದಿಂದ ಒಂಬೆ ಬೀದರ್‌ಗೆ ಮಾನ್ಯ ಕಪಿಚ್ ರಂಗನಾಥ್ ಬಂದಿದ್ದರು, ಹಾಗೂ ಬಹಳ ಸಲ ಪಶುಸಂಗೋಪನಾ ಸಚಿವರಿಗೆ ಗೂಳಿಗಳ ಹಾವಳಿ ಬಗ್ಗೆ ಮೂರು ಕೊಟ್ಟಿದ್ದಿವೆ. ಈ ಗೂಳಿಹಾವಳಿ 10 ವರ್ಷದಿಂದ ನಡೀತಾ ಇದೆ.

ಈ ಕ್ಷೇತ್ರದ ಹಿಂದಿನ ಶಾಸಕರು ಹಿಂದಿದ್ದ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದಿದ್ದರು, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾಜಿ ಸಚಿವರಾದ ಗುರುಪಾದಪ್ಪನವರೂ ಸಹ ಆಶ್ವಾಸನೆ ಕೊಟ್ಟಿದ್ದರು. ಆದರೆ ಇವತ್ತಿನ ತನಕ ಏನೂ ಆಗಿಲ್ಲ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ದೇವರ ಹೆಸರಿನಲ್ಲಿ ಆ ಭಾಗದ ಜನ ಗೂಳಿಗಳನ್ನು ಬಿಟ್ಟಿದ್ದಾರೆ. ಅವನ್ನು ಹಿಡಿದು ವರ್ಗಾವಣೆ ಮಾಡಬೇಕಾದರೆ ನಾವೂ, ಪೋಲೀಸ್ ಇಲಾಖೆ ಅರಣ್ಯ ಇಲಾಖೆಗಳೆಲ್ಲ ಸೇರಿ ತೀರ್ಮಾನ ಮಾಡಬೇಕಾಗುತ್ತದೆ. ಈಗ ಮೊಟ್ಟಮೊದಲನೆ ಸಲ ಈ ವಿಷಯ ನನ್ನ ಗಮನಕ್ಕೆ ಬಂದಿದೆ. ನಿನ್ನೆ ನಾನು ಮಾಹಿತಿ ಪಡೆದಂತೆ, ಅರಣ್ಯ ಇಲಾಖೆ ಜೊತೆ ನಮ್ಮ ಅಧಿಕಾರಿಗಳು ಈಗಾಗಲೇ ಸಂಪರ್ಕ ಮಾಡಿದ್ದಾರೆ. ಕಾನೂನಿನಡಿ ಆ ಗೂಳಿಗಳ ಕಾಟ ಅದಷ್ಟು ಬೇಗ ತಪ್ಪಿಸಲು ನಾವೂ ಮತ್ತು ಅರಣ್ಯ ಇಲಾಖೆಯವರು ಪ್ರಯತ್ನಮಾಡುತ್ತೇವೆ. ಏಕೆಂದರೆ ಅವನ್ನು ಶೂಟ್ ಮಾಡಬೇಕಾದರೆ ಅನುಮತಿ ಪಡೆಯಬೇಕು, ಮತ್ತೆ ೮ ಗೂಳಿಗಳನ್ನು ಈ ಕಡೆಯಿಂದ ಆ ಕಡೆಗೆ ವರ್ಗಾವಣೆ ಮಾಡಿದರೆ ಆ ಭಾಗದ ಜನರಿಗೂ ತೊಂದರೆ ಆಗುತ್ತದೆ. ಆದ್ದರಿಂದ ಯಾರಿಗೂ ತೊಂದರೆಯಾಗದಂತೆ, ಬೆಳೆ ಹಾನಿ ಯಾವ ರೀತಿ ತಪ್ಪಿಸಬೇಕೆಂದು ಸರ್ಕಾರ ಬಹಳ ದೀರ್ಘವಾಗಿ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುವುದು.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, 'ಇ' ಪ್ರಶ್ನೆಗೆ ಉತ್ತರದಲ್ಲಿ ತಿಳಿಸಿರುವುದರ ಬಗ್ಗೆ, ಮಾನ್ಯ ಸಚಿವರು ಯಾವ್ಯಾವ ಕ್ರಮ ತೆಗೆದುಕೊಂಡಿದ್ದೀರಿ, ಯಾವಾಗ ತೆಗೆದಕೊಂಡಿರಿ? ಹಾಗೆ ಎಷ್ಟು ಗೂಳಿಗಳನ್ನು ಸ್ಥಳಾಂತರಿಸಿದಿರಿ?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ ಗೂಳಿಗಳು ಬೆಳೆಯನ್ನು ತಿಂದು ಖಾಲಿಯಾದ ಮೇಲೆ ವಾಪಸ್ ಹೋಗುತ್ತವೆ. ಅದನ್ನು ಸಂಪೂರ್ಣ ನಿಲ್ಲಿಸಬೇಕಾದರೆ ಫೆನ್ಸಿಂಗ್ ಹಾಕಬೇಕು. ಹಾಗೆ ಮಾಡುವುದು ನಮ್ಮ ಇಲಾಖೆಗೆ ಸಂಬಂಧಿಸಿದ್ದಲ್ಲ. ಶೂಟ್ ಮಾಡಬೇಕಾದರೆ ಅದಕ್ಕೆ ಅನುಮತಿ ಪಡೆಯಬೇಕು. ಧರ್ಮದ ಹಿನ್ನೆಲೆಯಲ್ಲಿ ಕೆಲವು ಕುಟುಂಬ ಅವನ್ನು ಬಿಟ್ಟಿರುವುದರಿಂದ ಅವನ್ನು ನಿಭಾಯಿಸುವುದು ಸ್ವಲ್ಪ ಸೂಕ್ಷ್ಮವಾಗಿದೆ, ಕಾನೂನಿನಡಿ, we will give serious attention.

ಶ್ರೀ ಪ್ರಕಾಶ್ ಖಂಡ್ರೆ: ಎಷ್ಟು ಪಶುಗಳನ್ನು ಇವರ ಉತ್ತರದಂತೆ ಸ್ಥಳಾಂತರಿಸಿದ್ದಾರೆ ಅಂತ ಹೇಳಲಿ.

ಶ್ರೀ ಎ.ಕೃಷ್ಣಪ್ಪ: ಗೂಳಿಹಾವಳಿ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದೀರಿ, ಅವನ್ನು ನಿಯಂತ್ರಿಸಲು ಅರಣ್ಯ, ಪೋಲೀಸ್ ಇಲಾಖೆಗಳ ಜೊತೆ ನಾವು ಮಾತನಾಡಬೇಕಾಗುತ್ತದೆ.

ಶ್ರೀ ಪ್ರಕಾಶ್ ಖಂಡ್ರೆ: ಅಧ್ಯಕ್ಷರೇ 15-20 ಹಳ್ಳಿಗಳ ಬೆಳೆ ಹಾಳಾಗುತ್ತಿದೆ, ನೀವು ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

SRI A.KRISHNAPPA: This is harmful, no doubt. but, it is also a sensitive and emotional subject which we cannot simply answer. Please give some time. We will find out ways and means.

ಶ್ರೀ ಬಿ.ಆರ್.ಯಾವಗಲ್: ಈ ಗೂಳಿ ಹಾವಳಿ ನಮ್ಮ ಬಯಲುಸೀಮೆಯಲ್ಲೂ ಜಾಸ್ತಿ ಇದೆ. ಅವುಗಳ ಸಮೀಪ ಹೋಗಲೂ ಬಿಡುವುದಿಲ್ಲ. ಅರಣ್ಯ, ಪಶುಸಂಗೋಪನೆ ಇಲಾಖೆಗಳಿಗೆ ದೂರು ಕೊಟ್ಟರೂ ಅವರೂ ಹಿಡಿಯಲು ಸಾಧ್ಯವಾಗುತ್ತಿಲ್ಲ. ಇವುಗಳಿಂದ ಬಯಲುಸೀಮೆ ಕಡೆ ಹಿಂಗಾರು ಸಮಯದಲ್ಲಿ ಬಹಳ ಬೆಳೆ ನಾಶವಾಗುತ್ತಿದೆ. ಇದು ಧಾರ್ಮಿಕತೆಯನ್ನೆಲ್ಲ ಮೀರಿ ಹೋಗಿದೆ. ಅವೆಲ್ಲ ದೊಡ್ಡವಾಗಿ ಬೆಳೆದಿದ್ದು ಸಮೀಪ ಹೋದರೆ ಮರಣಾಂತಿಕ ಅಪಾಯ ಮಾಡುತ್ತವೆ. ಧಾರ್ಮಿಕತೆ ಬಿಟ್ಟು ಇವನ್ನು ನಿಯಂತ್ರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಇದರ ತೀವ್ರತೆ ಈಗ ಸರ್ಕಾರಕ್ಕೆ ಗೊತ್ತಾಗಿದೆ. ಕಾನೂನಿನಡಿಯಲ್ಲೇ ನಾವೇನಾದರೂ ಇದಕ್ಕೆ ಪರಿಹಾರ ಹುಡುಕಬೇಕಾಗಿದೆ. ಮಾಜಿ ಸಚಿವರು ಹೇಳಿದರು, ಹತ್ತರ ಹೋದರೆ ಸಾಯಿಸುತ್ತವೆ ಅಂತ. 30-40 ಹಿಂಡು ಒಂದೊಂದು ಕಡೆ ಇವೆಯೆಂದು ವರದಿ ಬಂದಿದೆ. ಶೂಟ್ ಮಾಡೋಣವೆಂದರೆ ಕಾನೂನಿನ ಅಡ್ಡಿ ಇದೆ. ಶೂಟ್ ಮಾಡುವುದನ್ನೂ ನಾವು ಮಾಡಬೇಕೋ ಅಥವಾ ಪೋಲಿಸ್ ಇಲಾಖೆ ಮಾಡಬೇಕೋ ಅಥವಾ ಬೇರೆ ಏನಾದರೂ ವಿಧಾನ ಕಂಡು ಹಿಡಿಯಬೇಕಾ ಎಂಬ ಬಗ್ಗೆ ಸಮಗ್ರ ಮಾತುಕತೆ ಆಗಬೇಕಾಗಿದೆ. ನಾವು ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಅವು ದೊಡ್ಡ ಗೂಳಿಗಳು, ಬಹಳ ಶಕ್ತಿಯುತವಾಗಿವೆ, ಅವುಗಳಿಂದ ಬೆಳೆಹಾನಿ, ಪ್ರಾಣಭಯವಿದೆ. ಆದ್ದರಿಂದ ಇದಕ್ಕೆ ಪರಿಹಾರ ಮಾರ್ಗೋಪಾಯವನ್ನು ಸರ್ಕಾರ ಕಂಡುಹಿಡಿಸುವುದೆಂದು ಶಾಸಕರಿಗೆ ತಿಳಿಸಬಯಸುತ್ತೇನೆ.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೇ ಇದು ಸರಿಯಾದ ಉತ್ತರವೇ ಅಲ್ಲ, ಸುಮ್ಮನೆ ಏನೋ ಉತ್ತರ ಕೊಟ್ಟು ಜಾರಿಕೊಂಡು ಹೋಗಿಬಿಡುತ್ತಾರೆ.

ಅಧ್ಯಕ್ಷರು: ಹೀಗೆ ಉತ್ತರವಿರಬೇಕೆಂದು ನಾನು ಸಚಿವರನ್ನು ಬಂದೋಬಸ್ತ್ ಮಾಡಲು ಸಾಧ್ಯವಿಲ್ಲ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೇ, ಗೂಳಿಗಳೇನೋ ರಾಜ್ಯದಲ್ಲಿ ಎಲ್ಲೋ ಕೆಲವು ಕಡೆ ಇವೆ. ಆದರೆ ಕರ್ನಾಟಕದಲ್ಲೆ ಪ್ರತಿ ಹಳ್ಳಿಯಲ್ಲೂ ನಾಯಿಗಳ ಕಾಟ

ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ? ಇದರಿಂದ ಜನಗಳಿಗೆ ಬಹಳ ತೊಂದರೆ ಇದೆ, ಹುಚ್ಚು ನಾಯಿಗಳ ಬಗ್ಗೆಯೂ ಸಚಿವರು ಹೇಳಬೇಕು.

ಅಧ್ಯಕ್ಷರು: ಇದರ ಬಗ್ಗೆ ನೀವು ಪ್ರತ್ಯೇಕ ಪ್ರಶ್ನೆ ಕೇಳಿ. ಇನ್ನು ಮುಂದಿನ ಪ್ರಶ್ನೆ ಶ್ರೀ ಪ್ರಭಾಕರ ಬಂಗೇರಾ ಅವರದು, ಸಂಬಂಧಿಸಿದ ಸಚಿವರು ತುರ್ತಾಗಿ ಅವರ ಕಡೆಯವರು ಯಾರೋ ತೀರಿ ಹೋಗಿದ್ದಾರೆಂದು ಹೋಗಿದ್ದಾರೆ, ಆದ್ದರಿಂದ ಮುಂದಿನ ಸೋಮವಾರ ತೆಗೆದುಕೊಳ್ಳೋಣ.

ಕಡದಲಮರಿ ಗ್ರಾಮದ ಪಶುವೈದ್ಯ ಶಾಲೆ ಬಗ್ಗೆ.

174 (2177)

ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡದಲಮರಿ ಗ್ರಾಮದ ಪಶುವೈದ್ಯಾ ಶಾಲೆಯ ಕಟ್ಟಡಕ್ಕೆ ಮಂಜೂರಾದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು; ಕಟ್ಟಡದ ಕಾಮಗಾರಿ ಪೂರ್ಣ ಮಾಡಿದ ತಾರೀಖು ಯಾವುದು; ಇಲಾಖೆಗೆ ವಹಿಸಿದ ತಾರೀಖು ಯಾವುದು?

ಆ) ಕಟ್ಟಡ ಪೂರ್ತಿಯಾಗಿ ಆರಂಭೋತ್ಸವ ನಡೆದಿದ್ದರೂ ಕಟ್ಟಡವನ್ನು ಇಲಾಖೆಗೆ ವಹಿಸಿಕೊಟ್ಟಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈ ಕಟ್ಟಡವನ್ನು ಸ್ಥಳೀಯರು ಬೇರೆ ಕೆಲಸಗಳಿಗೆಲ್ಲ ದುರುಪಯೋಗಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಮಂಜೂರಾದ ಹಣ ರೂ.96,000.00, ಖರ್ಚಾದ ಹಣ ರೂ.96,000.00, 1997-98ರಲ್ಲಿ ಕಟ್ಟಡ ಪೂರ್ಣಗೊಂಡಿದೆ. ಕಟ್ಟಡವನ್ನು ಇಲಾಖೆ ಹಸ್ತಾಂತರಿಸಿರುವುದಿಲ್ಲ.

ಆ) ಬಂದಿದೆ.

ಇ) ಬಂದಿದೆ.